## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1181 (1328) |
| ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16.03.2026 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಆಯುಷ್ ಇಲಾಖೆಯ ಗುತ್ತಿಗೆ ತಜ್ಞ ವೈದ್ಯರಿಗೆ ಅಲೋಪತಿ ಗುತ್ತಿಗೆ ತಜ್ಞ ವೈದ್ಯರಿಗಿಂತ ಕಡಿಮೆ ವೇತನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ತಾರತಮ್ಯದ ಮೂಲ ಕಾರಣಗಳು ಯಾವುವು; (ವಿವರವಾದ ಮಾಹಿತಿ ನೀಡುವುದು).</td><td>ರಾಷ್ಟ್ರೀಯ ಆಯುಷ್ ಅಭಿಯಾನದಡಿ ತಾತ್ಕಾಲಿಕ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರಿಗೆ 2023-24ನೇ ವರ್ಷದಲ್ಲಿ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳಿಗೆ ಜಾರಿಯಲ್ಲಿದ್ದ 6ನೇ ವೇತನ ಆಯೋಗದ ಮೂಲ ವೇತನದಲ್ಲಿ ₹100/- ಕಡಿತಗೊಳಿಸಿ 2023-24ನೇ ಸಾಲಿನಿಂದ ವೇತನ ಪರಿಷ್ಕರಿಸಿ ಈ ಕೆಳಕಂಡಂತೆ ಪಾವತಿಸಲಾಗುತ್ತಿದೆ ಮತ್ತು ಪ್ರತಿ ವರ್ಷ ಶೇ.5 ರಷ್ಟು ವೇತನವನ್ನು ಏರಿಕೆ ಮಾಡಲಾಗುತ್ತಿದೆ.<br>(₹ಗಳಲ್ಲಿ)<br><table><tr><th>ಕ್ರ. ಸಂ.</th><th>ಹುದ್ದೆಗಳು</th><th>6ನೇ ವೇತನ ಆಯೋಗದ ಮೂಲ ವೇತನ</th><th>ರಾಷ್ಟ್ರೀಯ ಆಯುಷ್ ಅಭಿಯಾನದಡಿ ನಿಗದಿಪಡಿಸಿದ ವೇತನ</th></tr><tr><td>1</td><td>ಆಯುಷ್ ತಜ್ಞ ವೈದ್ಯರು</td><td>52,650/-</td><td>52,556+5000 (PG Allowance) = 57,550/-</td></tr></table></td></tr>
<tr><td>ಆ)</td><td>ಆಯುಷ್ ತಜ್ಞ ವೈದ್ಯರನ್ನು ಅಲೋಪತಿ ತಜ್ಞ ವೈದ್ಯರ ಹುದ್ದೆಗಳ ಸಮಾನ ಹುದ್ದೆಗಳಲ್ಲಿ ಪರಿಗಣಿಸುವ ಕುರಿತು ಸರ್ಕಾರ ಯಾವುದೇ ನಿರ್ಧಾರ ತೆಗೆದುಕೊಂಡಿದೆಯೇ; ಇದ್ದಲ್ಲಿ, ವೇತನ ಮತ್ತು ಸೌಲಭ್ಯಗಳಲ್ಲಿ ಸಮಾನತೆ ತರಲು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು;</td><td>ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯು ಕೇಂದ್ರ ಸರ್ಕಾರದ ತಾತ್ಕಾಲಿಕ ಯೋಜನೆಯಾಗಿದ್ದು, ಈ ಯೋಜನೆಯಡಿ ಸೃಜಿಸಲಾದ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಈ ಹುದ್ದೆಗಳು ಯೋಜನೆಯು ಚಾಲ್ತಿಯಲ್ಲಿರುವವರೆಗೆ ಮಾತ್ರ ಅಸ್ತಿತ್ವದಲ್ಲಿರುತ್ತವೆ. ಈ ಕುರಿತು ನೇಮಕಾತಿ ಪ್ರಕಟಣೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಸದರಿ ಹುದ್ದೆಗಳನ್ನು ಅಲೋಪತಿ ತಜ್ಞ ವೈದ್ಯರ ಹುದ್ದೆಗಳ ಸಮಾನ ಹುದ್ದೆಗಳಲ್ಲಿ ಪರಿಗಣಿಸುವ ಕುರಿತು ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.</td></tr>
<tr><td>ಇ)</td><td>ಆಯುಷ್ ತಜ್ಞ ವೈದ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಪ್ರತ್ಯೇಕವಾಗಿ ರೂಪಿಸಲಾಗಿದೆಯೇ; ಇದ್ದಲ್ಲಿ, ಅದರ ವಿವರಗಳನ್ನು ನೀಡುವುದು. ಇಲ್ಲದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಆ ಕರ್ತವ್ಯ /ಜವಾಬ್ದಾರಿಗಳನ್ನು ನಿರ್ಧರಿಸಲಾಗುವುದು;</td><td>ಉಪ ಪ್ರಶ್ನೆ (ಆ) ರಲ್ಲಿ ತಿಳಿಸಿರುವಂತೆ, ಆಯುಷ್ ತಜ್ಞ ವೈದ್ಯರ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕ ಹುದ್ದೆಗಳಾಗಿದ್ದು, ರಾಷ್ಟ್ರೀಯ ಆಯುಷ್ ಅಭಿಯಾನದಡಿ ಇವರುಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಪ್ರತ್ಯೇಕವಾಗಿ ರೂಪಿಸಲಾಗಿದೆ (ಪ್ರತಿ ಲಗತ್ತಿಸಿದೆ).</td></tr>
</table>

| | | |
|---|---|---|
| ಈ) | ಆಯುರ್ವೇದ ತಜ್ಞ ವೈದ್ಯರ ಖಾಯಂ ಹುದ್ದೆಗಳನ್ನು ಸೃಜಿಸುವ ಕುರಿತು ಸರ್ಕಾರದ ನಿಲುವೇನು; ಈ ಕುರಿತು ವಿಳಂಬವಾಗುತ್ತಿರುವುದಕ್ಕೆ ಕಾರಣಗಳು ಹಾಗೂ ಯಾವುದೇ ಕಾನೂನಾತ್ಮಕ ಅಥವಾ ಆಡಳಿತಾತ್ಮಕ ತೊಡಕುಗಳಿವೆಯೇ ಎಂಬುದರ ಕುರಿತು ಮಾಹಿತಿ ನೀಡುವುದು; | ಆಯುಷ್ ಇಲಾಖೆಯಲ್ಲಿ ತಜ್ಞ ವೈದ್ಯರುಗಳ ಹುದ್ದೆಗಳು ಸೃಜನೆಯಾಗಿರುವುದಿಲ್ಲ. ತಜ್ಞ ವೈದ್ಯರ ಹುದ್ದೆಗಳು ಸೃಜನೆಯಾಗದ ಕಾರಣ ನೇಮಕಾತಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಉ) | ಕಳೆದ ಹತ್ತು ವರ್ಷಗಳಿಂದ ಆಯುಷ್ ಇಲಾಖೆಯಲ್ಲಿ ತಜ್ಞ ವೈದ್ಯರ ಅವಶ್ಯಕತೆ ಇದ್ದರೂ ಸಹ ಖಾಯಂ ನೇಮಕಾತಿ ಕೈಗೊಳ್ಳದಿರುವುದಕ್ಕೆ ಕಾರಣವೇನು; ಕೇವಲ ಗುತ್ತಿಗೆ ತಜ್ಞ ವೈದ್ಯರ ಮೇಲೆ ಇಲಾಖೆಯ ಸೇವೆಗಳು ನಿರ್ವಹಿಸುತ್ತಿರುವುದು ಸರಿಯಾದ ಕ್ರಮವೇ? (ಸಂಪೂರ್ಣ ವಿವರ ನೀಡುವುದು). | ಕೇಂದ್ರ ಪುರಸ್ಕೃತ ಯೋಜನೆಯ ರಾಷ್ಟ್ರೀಯ ಆಯುಷ್ ಅಭಿಯನಾದಡಿ ಮೇಲ್ದರ್ಜೆಗೇರಿಸಲಾದ 83 ಸರ್ಕಾರಿ ಆಯುಷ್ ಆಸ್ಪತ್ರೆಗಳಲ್ಲಿ 126 ತಜ್ಞ ವೈದ್ಯರುಗಳು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.<br><br>ಈ ಗುತ್ತಿಗೆ ತಜ್ಞ ವೈದ್ಯರ ಹುದ್ದೆಗಳು ಮಾತ್ರ ಪ್ರತಿ ವರ್ಷ ಕಾರ್ಯಕ್ಷಮತೆ ಮೌಲ್ಯಮಾಪನದ ಆಧಾರದ ಮೇಲೆ ಜಿಲ್ಲಾ ಆಯುಷ್ ಸಮಿತಿಯಿಂದ ಅನುಮೋದನೆಗೊಂಡು ಮುಂದುವರೆಸಲ್ಪಡುವ ಷರತ್ತಿಗೊಳಪಟ್ಟು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಈ ರೀತಿಯಾಗಿ ಇಲಾಖೆಯಲ್ಲಿ ತಜ್ಞ ವೈದ್ಯರ ಸೇವೆಯನ್ನು ಪಡೆಯಲಾಗುತ್ತಿದೆ. |

**ಸಂಖ್ಯೆ: ಆಕುಕ 67 ಪಿಟಿಡಿ 2026**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.**

**<u>Annexure – A</u>**

## ತಜ್ಞ ವೈದ್ಯರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳು

1. ಹೊರರೋಗಿಗಳ ಸೇವೆಯನ್ನು ರೋಗಿಗಳಿಗೆ ಆಯುಷ್ ವೈದ್ಯ ಪದ್ಧತಿಯಲ್ಲಿಯೆ ಚಿಕಿತ್ಸೆ ನೀಡುವುದು.
2. ರೋಗಿಗಳ ರೆಫರಲ್ (Referral) ಸೇವೆಯನು ಮಾಡುವುದು.
3. ಒಳ ರೋಗಿ ವಿಭಾಗವಿದ್ದಲ್ಲಿ ಒಳ ರೋಗಿಗಳ ಸೇವೆ (IP Service) ನೀಡುವುದು.
4. ಆಯುಷ್ ಔಷಧಿಗಳ ಸ್ವೀಕೃತಿ, ಸ್ಟಾಕ್ ರಿಜಿಸ್ಟರ್ ಪರಿಶೀಲನೆ ಹಾಗೂ ಔಷಧಿಗಳು ಖಾಲಿ ಆದಲ್ಲಿ ಔಷಧಿಗಳ ಮರು ಪೂರೈಕೆಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಬೇಡಿಕೆ ಸಲ್ಲಿಸುವುದು.
5. ರೋಗಿಗಳ OPD Register ಅನ್ನು ಹಾಗೂ Cross Reference ಮಾಡಿರುವ ರೋಗಿಗಳ ದಾಖಲೆ ನಿರ್ವಹಿಸುವುದು.
6. ಪ್ರತಿ ತಿಂಗಳು ದಾಖಲಾದ ಹೊರ ಮತ್ತು ಒಳ ರೋಗಿಗಳ ಮಾಹಿತಿಯನ್ನು ಔಷಧ ವಿತರಕರ ಜೊತೆ ಸಮನ್ವಯಗೊಂಡು HMIS web portal ನಲ್ಲಿ ನಮೂದಿಸುವುದು
7. ಪ್ರತಿ ನಿತ್ಯ ಆಸ್ಪತೆಗೆ ದಾಖಲಾಗುವ ರೋಗಿಗಳ ಮಾಹಿತಿಯನು ಔಷಧ ವಿತರಕರ ಜೊತೆ ಸಮನ್ವಯಗೊಂಡು DBT web portal ನಲ್ಲಿ ನಮೂದಿಸುವುದು.
8. ಆಯುಷ್ ಪದ್ಧತಿಯಲ್ಲಿರುವಂತೆ ಪೌಷ್ಟಿಕ ಆಹಾರಗಳ ಬಗ್ಗೆ ಹಾಗೂ ನೈರ್ಮಲ್ಯದ ಬಗ್ಗೆ ರೋಗಗಳಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮಗಳಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳ ಸೂಚನೆ ಮೇರೆಗೆ ಭಾಗವಹಿಸುವುದು.
9. ಪ್ರತಿ ತಿಂಗಳು ಜಿಲ್ಲಾ ಆಯುಷ್ ಅಧಿಕಾರಿಗಳು ನಡೆಸುವ ಸಭೆಗಳಿಗೆ ಸೂಕ್ತ ಮಾಹಿತಿಯೊಂದಿಗೆ ಹಾಜಾರಾಗತಕ್ಕದ್ದು ಹಾಗೂ ವಹಿಸುವ ಕೆಲಸವನು ನಿರ್ವಹಿಸುವುದು.
10. ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು.
11. ಸಾರ್ವಜನಿಕರೊಂದಿಗೆ ಹಾಗೂ ಸಿಬ್ಬಂದಿಗಳೊಂದಿಗೆ ಸೌಹಾರ್ದದಿಂದ ನಡೆದುಕೊಳ್ಳುವುದು.
12. ಆಯುಷ್ ಪದ್ಧತಿಯನ್ನು ಮುಖ್ಯ ವಾಹಿನಿಗೆ ತರುವ ಎಲ್ಲಾ ಕಾರ್ಯಕ್ರಮಗಳಿಗೆ ಸ್ಪಂದಿಸುವುದು.
13. ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು
14. ಸಾಮಾನ್ಯ ವೈದ್ಯಕೀಯ ದಾಖಲಾತಿಗಳು ಹಾಗೂ ವಹಿಗಳನ್ನು ಹಾಗೂ ಔಷಧಿಗಳ ನಿರ್ವಹಣೆ ಮಾಡುವುದು.
15. ಆಯುಷ್ ವೈದ್ಯರುಗಳು, ಚಿಕಿತ್ಸೆ ನೀಡುವ ರೋಗಿಗಳ ಮಾಹಿತಿಯ ಅಂಕಿ ಅಂಶಗಳನು ಪ್ರತ್ಯೇಕ ವಹಿಯಲ್ಲಿ ನಿರ್ವಹಿಸಿ ಪ್ರತಿ ಮಾಹೆಯ ವರದಿಯನ್ನು ಸದರಿ ಸಂಸ್ಥೆಯ ಆಡಳಿತ ವೈದ್ಯರ ದೃಢೀಕರಣದೊಂದಿಗೆ ಪ್ರತಿ ತಿಂಗಳು 30ನೇ ತಾರೀಖಿನೊಳಗೆ ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಸಲ್ಲಿಸುವುದು.
16. ಎಲ್ಲಾ ಆಯುಷ್ ವೈದ್ಯರುಗಳು ಆಯುಷ್ ಪದ್ಧತಿಯ ಔಷಧ ಕ್ರಮವನ್ನು ಅನುಸರಿಸತಕ್ಕದ್ದು.
17. ರಾಷ್ಟ್ರೀಯ ಆಯುಷ್ ಅಭಿಯಾನ ವಿಭಾಗದಿಂದ ಅನುಷ್ಠಾಗೊಳಿಸುವ ಎಲ್ಲಾ ಯೋಜನೆ/ಕಾರ್ಯಕ್ರಮಗಳ ಯಶಸ್ಸಿಗೆ ಸಹಕರಿಸುವುದು.
18. ಮೇಲಾಧಿಕಾರಿಗಳು ವಹಿಸುವಂತಹ ಇನ್ನಿತರ ಕೆಲಸಗಳನ್ನು ನಿರ್ವಹಿಸುವುದು.
19. ಷರತ್ತು ಮತ್ತು ನಿಬಂಧನೆಗಳಲ್ಲಿ ತಿಳಿಸಿರುವ ಅಂಶಗಳಂತೆ ಕರ್ತವ್ಯ ನಿರ್ವಹಿಸುವುದು.

'ಟಿಪ್ಪಣಿಯು ಮಾನ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ'

[illegible]ರು
SARASWATHI S NAVALLI
Date: 04-03-2026
13:42:44



File No. HFW/62/PTD/2026-IMD-HEALTH AND FAMILY WELFARE SEC (Computer No. 2098847)
Generated from eOffice by varalakshmi, AYUSH-AO, ADMINISTRATIVE OFFICER, DIRECTORATE OF AYUSH on 12/03/2026 01:31 PM